Tumbe Group of International Journal
A Peer Reviewed Multidisciplinary Journal
ISSN: 2581-8511
Volume- 3
Issue-1
January-April: 2020

# ಉತ್ತರ ಕರ್ನಾಟಕದಲ್ಲಿನ ವ್ಯವಸಾಯ ಸಂಬಂಧಿಯಾದ ಆಚರಣೆಗಳು

**ಪ್ರೊ. ಸೋಮಣ್ಣ ಹೊಂಗಳ್ಳಿ,**
ಕನ್ನಡ ಪ್ರಾಧ್ಯಾಪಕರು, ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ,
ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಕೊಣಾಜೆ, 574 199
Email: shongalli@gmail.com Ph: 9886165134

**ಪೀಠಿಕೆ:**

ಕೃಷಿಯನ್ನೇ ಪ್ರಧಾನ ವೃತ್ತಿಯಾಗಿ ಅವಲಂಬಿಸಿರುವ ಜನತೆ ಆ ವೃತ್ತಿಗನುಗುಣವಾದ ಒಂದು ಜೀವನಪದ್ಧತಿಯನ್ನು ರೂಢಿಸಿಕೊಂಡಿರುವುದು ಸ್ವಾಭಾವಿಕ. ಸುಂದರ ಬದುಕನ್ನು ಬದುಕಲು, ಆ ಬದುಕನ್ನು ಹಸನುಗೊಳಿಸಿಕೊಳ್ಳಲು ಈ ಜನ ತಮ್ಮ ಜೀವನ ಚಕ್ರದ ಬಹುಮುಖ್ಯ ಘಟ್ಟಗಳಲ್ಲಿ ಆಚರಿಸುವ ಸಂಪ್ರದಾಯಾಚರಣೆಗಳಲ್ಲದೆ ಹೊಟ್ಟೆಪಾಡಿಗಾಗಿ ತಾವು ಅವಲಂಬಿಸಿರುವ ಕಸುಬಿನ ಹಿನ್ನಲೆಯಲ್ಲೂ ಅನೇಕಾನೇಕ ಸಂಪ್ರದಾಯಗಳನ್ನು ರೂಢಿಸಿಕೊಂಡಿರುವುದು ಸಾಮಾನ್ಯ. ಇಲ್ಲಿನ ಭೌಗೋಳಿಕ ಹಾಗೂ ಸಾಮಾಜಿಕ ವೈಶಿಷ್ಟ್ಯಗಳ ಆಧಾರದ ಮೇಲೆ ವಿಭಿನ್ನ ಸ್ವರೂಪದ ಕೃಷಿ ಸಂಸ್ಕೃತಿಯನ್ನು ರೂಪಿಸಿಕೊಂಡಿರುವ ಕರ್ನಾಟಕದ ರೈತಾಪಿಗಳು ಸಂತಾನ ಪ್ರಾಪ್ತಿಗಾಗಿ, ಮಳೆಬೆಳೆ ಫಲಸಮೃದ್ಧಿಗಾಗಿ, ಸಂಪತ್ತಿಗಾಗಿ, ಲೋಕಕಲ್ಯಾಣಕ್ಕಾಗಿ ಅನೇಕಾನೇಕ ಸಂಪ್ರದಾಯಾಚರಣೆಗಳನ್ನು ಇಂದಿಗೂ ಆಚರಣೆಯಲ್ಲಿ ಉಳಿಸಿಕೊಂಡಿರುವುದನ್ನು ಕಾಣುತ್ತೇವೆ. ಪ್ರಾದೇಶಿಕ ವಿಶೇಷಗಳೊಡನೆ ಜೀವಂತವಾಗಿರುವ ವ್ಯವಸಾಯ ಸಂಬಂಧಿಯಾದ ಕೆಲವು ಆಚರಣೆಗಳನ್ನು ಪರಿಚಯ ಮಾಡಿಕೊಳ್ಳುವುದು ಈ ಲೇಖನದ ಉದ್ದೇಶ. ಸದ್ಯ ಪ್ರಚಲಿತವಿರುವ ಉತ್ತರ ಕರ್ನಾಟಕದಲ್ಲಿನ ವ್ಯವಸಾಯ ಸಂಬಂಧಿ ಆಚರಣೆಗಳಲ್ಲಿ ಜೋಕುಮಾರನ ಪೂಜೆ, ಗುಳ್ಳವ್ವನ ಪೂಜೆ,ಅರಲೆ ಬಸವನ ಪೂಜೆ, ತಾರ್ಲೆ, ಭೂಮಿಹುಣ್ಣಿಮೆ, ಮಳೆಮಲ್ಲಪ್ಪನ ಪೂಜೆ, ಮಳೆರಾಯನ ಪೂಜೆ, ಭೂಮಿಪೂಜೆ, ತಿಂಗಳ ಮಾವನ ಪೂಜೆ, ಕೊಂತಿಪೂಜೆ ಮುಖ್ಯವಾದವು.

**3.1. ಜೋಕುಮಾರನ ಪೂಜೆ:**

ವ್ಯವಸಾಯ ಸಂಬಂಧಿ ಆಚರಣೆಗಳನ್ನು ಕುರಿತು ಈ ಭಾಗದಲ್ಲಿ ಚರ್ಚಿಸಲಾಗುವುದು. ಅವುಗಳಲ್ಲಿ ಜೋಕುಮಾರನ ಪೂಜೆ, ಗುಳ್ಳವ್ವನ ಪೂಜೆ, ಅರಳೆ ಬಸವನ ಪೂಜೆ, ತಾರ್ಲೆ ಆಚರಣೆ, ಭೂಮಿ ಹುಣ್ಣಿಮೆ ಮುಂತಾದವು ಮುಖ್ಯವಾದವು. ಉತ್ತರ ಕರ್ನಾಟಕದಲ್ಲಿ ಮಾತ್ರವೇ ಆಚರಣೆಯಲ್ಲಿ ಉಳಿದುಬಂದಿರುವ ವಿಶಿಷ್ಟವಾದ ಆಚರಣೆ ಜೋಕುಮಾರನ ಪೂಜೆ. ಇದು ವ್ಯವಸಾಯ ಸಂಬಂಧವಾದ ಒಂದು ಆಚರಣೆ. ಈ ಆಚರಣೆಗೆ ಅನಂತನ ಹುಣ್ಣಿಮೆ, ಜೋಕುಮಾರನ ಹುಣ್ಣಿಮೆ ಅಥವಾ ಹೊಲೇರ ಹುಣ್ಣಿಮೆ ಎಂಬುದಾಗಿ ಕರೆಯುತ್ತಾರೆ. (ವೃಷಭೇಂದ್ರ ಸ್ವಾಮಿ, ಎಸ್. ಎಂ.1987:98). ಜೋಕುಮಾರ ಒಬ್ಬ ಜನಪದ ದೇವತೆ. ಇವನಿಗಾಗಿ ಪ್ರತ್ಯೇಕವಾಗಿ ಎಲ್ಲಿಯೂ ದೇವಸ್ಥಾನಗಳಿಲ್ಲ. ಕಬ್ಬಲಿಗ:ಕುಂಬಾರ ಜಾತಿಯ ಜನರು ಮಾತ್ರ ಜೋಕುಮಾರನ ಮೂರ್ತಿಯನ್ನು ಹೊತ್ತು ತಿರುಗುವುದು ಒಂದು ವಿಶೇಷವಾಗಿದೆ. ಬಹು ಪ್ರಾಚೀನ ಕಾಲದಿಂದಲೂ ಜೋಕುಮಾರನ ಆಚರಣೆಯು ರೂಢಿಯಲ್ಲಿದ್ದಂತೆ ತಿಳಿದುಬರುತ್ತದೆ. ಜೋಕುಮಾರ ಹುಟ್ಟುವುದು ಭಾದ್ರಪದ ಮಾಸದಲ್ಲಿ. ಅವನು ಹುಟ್ಟಿದ ಮೇಲೆ ಮಳೆಯಾಗುವುದೆಂಬ ನಂಬಿಕೆ ಇರುವುದರಿಂದ, ರೈತರು ಬಹಳ ಸಂಭ್ರಮ ಆದರಗಳಿಂದ ಜೋಕುಮಾರನನ್ನು ಬರಮಾಡಿಕೊಳ್ಳುತ್ತಾರೆ.

ಈ ಬಗೆಯ ಪೂಜೆಯನ್ನು "ಮಣ್ಣುಪೂಜೆ" ಎಂಬುದಾಗಿ ಕರೆಯುತ್ತಾರೆ. ಇದು ನಾಲ್ಕನೆಯ ಮಣ್ಣುಪೂಜೆ ಅನ್ನುವ ನಂಬಿಕೆ ಉಂಟು. ಮೊದಲನೆಯದು ಮಣ್ಣೆತ್ತಿನ ಅಮವಾಸ್ಯೆಯಲ್ಲಿ ಮಾಡುವ ಎತ್ತಿನ ಪೂಜೆ. ಎರಡನೆಯದು ಗುಳ್ಳವ್ವನ ಪೂಜೆ. ಮೂರನೆಯದು ಪಂಚಮಿಯಲ್ಲಿ ಮಾಡುವ ಹುತ್ತಪ್ಪನ ಪೂಜೆ. ಅನಂತರ ಕೊನೆಯದಾದ ಅನಂತನ ಹುಣ್ಣಿಮೆಯಲ್ಲಿ ಆಚರಿಸುವ ಜೋಕುಮಾರನ ಪೂಜೆ. ಈ ನಾಲ್ಕು ಸಂಪ್ರದಾಯಗಳನ್ನು ರೈತರು ತುಂಬ ಶ್ರದ್ಧೆ ಭಕ್ತಿಗಳಿಂದ ಆಚರಿಸುತ್ತಾರೆ.

**ಜೋಕುಮಾರನ ಹುಟ್ಟಿನ ಬಗೆಗೆ ಅನೇಕ ಕಥೆಗಳು ಪ್ರಚಲಿತವಾಗಿವೆ:**

ಸಪ್ತಋಷಿಗಳ ಮೆಚ್ಚಿನ ಸೇವಕನಾದ ಜೋಕನಿಗೆ ಮತ್ರ್ಯಲೋಕದ ವೈಭವವನ್ನು ಸವಿಯಬೇಕೆಂಬ ಬಯಕೆ ಬಂದಿತು. ಋಷಿಗಳಲ್ಲಿ ತನ್ನ ಮನದಾಸೆಯನ್ನು ತಿಳಿಸಿದಾಗ ಅವರು ಒಪ್ಪಿ ಮೃಷ್ಟಾನ್ನವನ್ನು ಉಣ್ಣಬಾರದು; ಬಾಲೆಯರಿಗೆ ಮನಸೋಲಬಾರದು, ಅದಷ್ಟು ಬೇಗ ಹಿಂದಿರುಗಬೇಕು. ಎಂದು ಷರತ್ತುಗಳನ್ನು ಹಾಕಿ ಕಳುಹಿಸಿಕೊಡುತ್ತಾರೆ. ಅದರಂತೆಯೇ ಅವನು ಭೂಮಿಗೆ ಬರುವಷ್ಟರಲ್ಲಿ ಸಂಜೆಯಾಗುತ್ತದೆ. ಆವನು ಆ ರಾತ್ರಿ ಉಳಿದುಕೊಳ್ಳುವುದಕ್ಕೆ ಜಾಗವಿಲ್ಲದೆ ಯೋಚಿಸುತ್ತಿರುವಾಗ ಮುಂದೆ ಕಾಣಿಸಿಕೊಂಡ ಮಾರಿಯ ಗುಡಿಗೆ ಹೋಗಿ ಸುಶ್ರಾವ್ಯವಾಗಿ ಹಾಡುತ್ತಾ ಕುಳಿತುಕೊಂಡ. ಅವನ ಹಾಡಿಗೆ ಮಾರುಹೋದ ಮಾರಿಯು ಬಗೆ ಬಗೆಯ ಅಡುಗೆಯನ್ನು ಮಾಡಿ ಚಿನ್ನದ ಹರಿವಾಣದಲ್ಲಿ ಬಡಿಸಿ ಜೋಕನ ರೂಪಕ್ಕೆ ಬೆರಗಾಗಿ ನಿಲ್ಲುತ್ತಾಳೆ. ಜೋಕನಿಗೆ ತಾನು ಊಟ ಮಾಡಿದರೆ ತನಗೆಲ್ಲಿ ತೊಂದರೆಯಾಗುವುದೋ ಎಂಬ ಆತಂಕವಿದ್ದಿತಾದರೂ ಭಕ್ಷ್ಯ ಭೋಜನದ ವಾಸನೆ ಅವನನ್ನು ಬಿಡಲಿಲ್ಲ. ಧೈರ್ಯಮಾಡಿ ಊಟ ಮಾಡಿದುದಲ್ಲದೆ ಅವಳ ರೂಪಕ್ಕೆ ಮನಸೋಲುತ್ತಾನೆ. ಮಾರಿಯ ದೈಹಿಕ ಸಂಪರ್ಕದಿಂದ ತನಗೆ ಅಪಚಾರವಾಯಿತೆಂದು ನಡುಗುತ್ತಲೇ ಋಷಿಗಳ ಬಳಿಗೆ ಹೋದಾಗ ಋಷಿಗಳು ಅವನನ್ನು ಕೋಪದಿಂದ ಕಾಲಲ್ಲಿ ಒದ್ದು ಬಿಡುತ್ತಾರೆ. ಆಗ ಅವನು ಪಶ್ಚಾತ್ತಾಪ ವ್ಯಕ್ತಪಡಿಸಿದಾಗ ಏಳು ದಿನಗಳು ಇದ್ದು ಇಲ್ಲಿಗೆ ಬಾ ಎಂದು ವಿಮೋಚನೆಗೊಳಿಸುತ್ತಾರೆ. ಜೋಕನ ದೈಹಿಕ ಸಂಪರ್ಕವನ್ನು ಪಡೆದುದರ ಫಲವಾಗಿ ಭಾದ್ರಪದ ಶುದ್ಧದಲ್ಲಿ ಅಷ್ಟಮಿಯ ದಿನ ಮಾರಿಯು ಗಂಡು ಮಗುವೊಂದಕ್ಕೆ ಜನ್ಮಕೊಡುತ್ತಾಳೆ. ಆ ಮಗುವೇ ಜೋಕುಮಾರ.

ಜೋಕುಮಾರ ತನ್ನ ತಂದೆ ಯಾರೆಂದು ತಿಳಿದುಕೊಳ್ಳಲು ಹೊರಟ. ಹೀಗೆ ಏಳು ದಿನ ಹುಡುಕುತ್ತಾ ಇರುವಾಗ ಹುಣ್ಣಿಮೆ ಬಂದಿತು. ಆ ಹುಣ್ಣಿಮೆಯ ದಿನ ಅಗಸರೆಲ್ಲರೂ ಒಂದೆಡೆ ಸೇರಿಕೊಂಡು ಮನೆಮನೆಗೆ ಹೋಗಿ ಬೇಡಿ ರೈತಾಪಿಗಳು ಕೊಟ್ಟ ದವಸಧಾನ್ಯಗಳನ್ನು ಹೆಡಿಗೆಗೆ ತುಂಬಿಕೊಂಡು ಊರ ಹೊರಗೆ ಅಡುಗೆ ಮಾಡಿ, ಗಂಗೆಯ ಕಲ್ಲನ್ನು ಪೂಜೆಮಾಡುತ್ತಿರುತ್ತಾರೆ. ಊಟ ಮಾಡುವ ಸಂದರ್ಭದಲ್ಲಿ ಕತ್ತೆಗಳು ಹೊಲಗಳಿಗೆ ನುಗ್ಗಿ ಬೆಳೆಗಳನ್ನು ಹಾಳುಮಾಡದಂತೆ ನೋಡಿಕೊಳ್ಳಲು ಸುಕರ್ಣಿಕ ಎಂಬುವಳನ್ನು ನೇಮಿಸಿರುತ್ತಾರೆ. ತಂದೆಯನ್ನು ಹುಡುಕುತ್ತಾ ಬಂದ ಜೋಕುಮಾರ ಸುಕರ್ಣಿಕೆಯ ರೂಪಕ್ಕೆ ಮರುಳಾಗಿ ಆಕೆಯನ್ನು ಪೀಡಿಸತೊಡಗುತ್ತಾನೆ. ಆಕೆ ಭಯದಿಂದ ಕೂಗಿಕೊಳ್ಳುತ್ತಾಳೆ. ಅಗಸರು ಬಂದು ಜೋಕುಮಾರನನ್ನು ಬಡಿದು ಸಾಯಿಸಿ ಅವನನ್ನು ಬಟ್ಟೆ ಒಗೆಯುವ ಕಲ್ಲಿನ ಕೆಳಗೆ ಹಾಕಿ ಮುಚ್ಚುತ್ತಾರೆ. ಅಲ್ಲಿಗೆ ಅವನ ಶಾಪ ವಿಮೋಚನೆಯಾಗಿ ಸಪ್ತಋಷಿಗಳನ್ನು ಸೇರಿಕೊಳ್ಳುತ್ತಾನೆ.

ಎರಡನೆಯ ಕಥೆಯ ಪ್ರಕಾರ, ಚಿಕ್ಕವನಿರುವಾಗಲೇ ಮೊಂಡಾಟವನ್ನು ಆಡುತ್ತಾ ಕಂಡ ಕಂಡ ಹೆಣ್ಣುಗಳ ಬೆನ್ನುಹತ್ತಿ ಕಾಡಿಸತೊಡಗಿದಾಗ ಅಗಸರು ಬೇಸತ್ತು ಹೊಡೆದು ಸಾಯಿಸಿ ಒಗೆಯುವ ಕಲ್ಲಿನ ಕೆಳಗೆ ಮುಚ್ಚಿಟ್ಟರು.ಕೆಲವು ಕಡೆಗಳಲ್ಲಿ ಜೋಕುಮಾರನು ಜೋಕುಋಷಿ ಹಾಗೂ ಎಳೆ ಗೌರಿಗಳ ಮಗನೆಂದೂ ಹೇಳುತ್ತಾರೆ. ಅವರು ಸಂತಾನ ಫಲವಿಲ್ಲದೆ ಶಿವನನ್ನು ಕುರಿತು ಪ್ರಾರ್ಥಿಸಿದಾಗ ಶಿವ ಅವರಿಗೆ ಏಳು ದಿನ ಆಯಸ್ಸುಳ್ಳ ಮಗನನ್ನು ಕರುಣಿಸಿದನೆಂದು ಹೇಳುತ್ತಾರೆ. ಅಂತೆಯೇ ಭಾದ್ರಪದ ಮಾಸದಲ್ಲಿ ಒಂದು ವಾರದವರೆಗೂ ಅಗಸರ

ಹೆಂಗಸರು ಮನೆಮನೆಗೂ ಹೋಗಿ ಜೋಕುಮಾರನನ್ನು ಕುರಿತ ಹಾಡುಗಳನ್ನು ಹಾಡುತ್ತಾ ದವಸಧಾನ್ಯಗಳನ್ನು ಶೇಖರಿಸಿ ಹಬ್ಬವನ್ನು ಆಚರಿಸುವುದು ಸಂಪ್ರದಾಯವಾಗಿ ಬೆಳೆದುಬಂದಿದೆ.

ಇನ್ನೊಂದು ಕಥೆಯ ಪ್ರಕಾರ ಚಿಕ್ಕವನಿರುವಾಗಲೇ ಜೋಕುಮಾರ ತುಂಬಾ ಕಾಮುಕನಾಗಿದ್ದ. ಕಂಡಕಂಡವರನ್ನೆಲ್ಲ ಇಣುಕಿ ನೋಡುತ್ತಿದ್ದ. ಒಂದು ದಿನ ಬ್ರಾಹ್ಮಣ ಸ್ತ್ರೀಯು ಸ್ನಾನ ಮಾಡುತ್ತಿದ್ದಾಗ ಬಚ್ಚಲು ಮರೆಯಿಂದ ಇಣುಕಿ ನೋಡಿತ್ತಿದ್ದನಂತೆ. ಆಗ ಅವಳು ಅಕಸ್ಮಾತ್ತಾಗಿ ನೋಡಿ ಸೀರೆಯುಟ್ಟುಕೊಂಡು ಕಚ್ಚೆ ಬಿಗಿದುಕೊಂಡು ಓಡಿದಳು.(ಆಗಿನಿಂದಲೂ ಬ್ರಾಹ್ಮಣ ಸ್ತ್ರೀಯರು ಕಚ್ಚೆ ಹಾಕಿಯೇ ಸೀರೆ ಉಡಲು ಪ್ರಾರಂಭಿಸಿದರೆಂದು ಹೇಳುತ್ತಾರೆ). ಓಣಿಯ ಹೆಣ್ಣುಗಳೆಲ್ಲ ಇವನ ಬಗ್ಗೆ ದೂರು ಹೇಳತೊಡಗಿದಾಗ ಹೊಲೇರ ಓಣಿಯಲ್ಲಿ ತಲೆ ಕತ್ತರಿಸಿ ಅಗಸರು ಬಟ್ಟೆ ಒಗೆಯುವ ಕಲ್ಲಿನ ಕೆಳಗೆ ಮುಚ್ಚಿಟ್ಟರು ಎಂಬುದೊಂದು ಕಥೆಯಿದೆ.

ಈ ಮೇಲೆ ನಿರೂಪಿಸಿದ ಕಥೆಗಳಿಗಿಂತ ಭಿನ್ನವಾದ ಇನ್ನೊಂದು ಕಥೆಯ ಪ್ರಕಾರ ಮಳೆಬೆಳೆ ತರುವ ದೇವತೆ. ಗಣಪತಿಯು ಮೃಷ್ಟಾನ್ನ, ಮೋದಕ ಉಂಡು ಹೋಗಿ ಜನರೆಲ್ಲ ಅತ್ಯಂತ ಸುಖವಾಗಿಯೇ ಇದ್ದಾರೆಂದು ಶಿವನ ಬಳಿ ಹೇಳಿದ. ಆತ ಹೋದ ಕೆಲವು ದಿನಗಳಲ್ಲಿ ಜೋಕುಮಾರನು ಶಿವನ ಬಳಿಗೆ ಹೋಗಿ, ಓಣಿಯಲ್ಲೆಲ್ಲ ತಿರುಗಾಡಿ ಬಂದಿದ್ದೇನೆ. ಮಳೆಬೆಳೆ ಇಲ್ಲದೆ ಜನರೆಲ್ಲ ಕಂಗಾಲಾಗಿದ್ದಾರೆ, ದುಃಖದಲ್ಲಿದ್ದಾರೆಂದು ಶಿವನಿಗೆ ಹೇಳಿದ. ಶಿವನು ಇವನ ಮಾತಿಗೆ ಕಣ್ತೆರೆದು ನೋಡಿದನು. ಆಗ ಮಳೆಯು ಬಂದಿತು. ಬೆಳೆಯು ಸಮೃದ್ಧವಾಗಿ ಬಂದಿತು.

ಈ ಮೇಲಿನ ಕಥೆಗಳನ್ನು ನೋಡಿದಾಗ ಜೋಕುಮಾರನನ್ನು ಕುರಿತು ಎರಡು ಅಭಿಪ್ರಾಯಗಳಿರುವುದು ಸ್ಪಷ್ಟ. ಜೋಕುಮಾರನೊಬ್ಬ ಕಾಮುಕ, ಪುಂಡ. ಅತಿ ಕಾಮುಕತನದಿಂದ ನಡೆದುಕೊಂಡದ್ದಾಕ್ಕಾಗಿ ಅವನಿಗೆ ಹೊಲೇರ ಓಣಿಯಲ್ಲಿ ಹೊಡೆದು ಸಾಯಿಸಿ ಅಗಸರ ಬಟ್ಟೆ ಒಗೆಯುವ ಕಲ್ಲಿನ ಕೆಳಗೆ ಮುಚ್ಚಿಡಲಾಯಿತು. ನೀತಿಗೆಟ್ಟು ನಡೆದವರಿಗೆ ಉಳಿಗಾಲವಿಲ್ಲ ಎಂಬ ಆಶಯ ಈ ನೀತಿಯಲ್ಲಿರುವುದು ಸ್ಪಷ್ಟ. ಅವನು ದುರ್ಬುದ್ಧಿಯವನಾಗಿದ್ದರೂ ಕೆಲವು ಜನರಿಗಾದರೂ ಒಳ್ಳೆಯದನ್ನು ಮಾಡಿದಂತಿದೆ. ಒಳಿತನ್ನು ಮಾಡುವ ದೇವರು ಎಂದು ಜನ ನಂಬಿಕೊಂಡಿದ್ದಾರೆ. ಅವನು ಬಂದುಹೋದ ಮೇಲೆ ಗೊಡ್ಡುಗಳು ಹಾಲು ಕೊಡಲು ಆರಂಭಿಸುತ್ತವೆ. ಅವನನ್ನು ಅರಸಿಕೊಂಡು ಕುಂಚಿಗೆ, ಕುಲಾಯಿ ಹೊಲಿದುಕೊಟ್ಟರೆ ಬಂಜೆಗೂ ಮಕ್ಕಳಾಗುತ್ತವೆ. ಹೊಲಗಳಲ್ಲಿ ಸಮೃದ್ಧವಾಗಿ ಬೆಳೆಬರುತ್ತವೆ ಎಂಬ ನಂಬಿಕೆಗಳು ಪ್ರಬಲವಾಗಿವೆ. ಇವು ಈ ಆಚರಣೆಯ ಮಹತ್ವವನ್ನು ಮನಗಾಣಿಸುತ್ತವೆ.

ಈ ಆಚರಣೆಗಾಗಿ ನಿರ್ಮಿಸಲಾಗುವ ಮೂರ್ತಿಯ ಸ್ವರೂಪ ಆಕರ್ಷಕವಾಗಿರುತ್ತದೆ. ಅದು ಮಣ್ಣಿನಿಂದ ಮಾಡಿದ ಪುರುಷ ಮೂರ್ತಿಯಾಗಿರುತ್ತದೆ. ಕೋರೆ ಮೀಸೆ, ಗುರುತರವಾದ ಹುಬ್ಬು, ದಪ್ಪನಾದ ತುಟಿಗಳು, ಉದ್ದ ಮೂಗು, ಸಾಮನ್ಯವಾದ ದೇಹಾಕೃತಿಗೆ ಎದ್ದು ಕಾಣುವ ಜನನೇಂದ್ರಿಯ ಇರುತ್ತದೆ. ಸಗಣಿಯಿಂದ ಸಾರಿಸಿದ ಬಿದಿರಿನ ಹೆಡಿಗೆಯಲ್ಲಿ ಈ ಮೂರ್ತಿಯನ್ನು ಇಟ್ಟುಕೊಂಡು ಅದರ ಮೇಲೆ ಬೇವಿನ ಸೊಪ್ಪನ್ನು ಹಾಕುತ್ತಾರೆ. ಮೂರ್ತಿಯ ಬಾಯಿಗೆ ಮತ್ತು ಜನನೇಂದ್ರಿಯಕ್ಕೆ ಬಣ್ಣೆಯನ್ನು ಲೇಪಿಸುವುದು ವಿಧಿ. ಜೋಕುಮಾರನನ್ನು ಕುರಿತ ಹಾಡುಗಳನ್ನು ಹೇಳುತ್ತ ಹೆಂಗಸರು ಊರಿನ ರೈತಾಪಿಗಳ ಮನೆಗೆ ಹೋಗುವುದು ಪದ್ಧತಿ. ಮನೆಯ ಹೆಂಗಸರು ಜೋಳ, ರಾಗಿ, ಅಕ್ಕಿ, ಹುಣಸೇಹಣ್ಣು, ಮೆಣಸಿನಕಾಯಿ, ಕೊಬ್ಬರಿ ಮುಂತಾದ ದವಸಧಾನ್ಯ, ಬೆಣ್ಣೆ ಕುಲಾಯಿ ಕೊಂಬಿಗೆ ಮುಂತಾದ ಅರಿವೆಗಳನ್ನೂ ಕೊಡುತ್ತಾರೆ. ಜೋಕುಮಾರನನ್ನು ಮಾರಿಯ ಮಗನೆಂದು ಬಗೆದು, ಮಾರಿಯ ಕಾಟವನ್ನು ತಪ್ಪಿಸುವ ಸಲುವಾಗಿ ಕಾಣಿಕೆಯ ರೂಪದಲ್ಲಿ ದವಸಧಾನ್ಯಗಳನ್ನು ಕೊಡುವುದೂ ಉಂಟು. ಇದರಿಂದಾಗಿ ಅವನ ಕಾಟ ತಪ್ಪುವುದಿಲ್ಲವೆಂದು ನಂಬುತ್ತಾರೆ.

ಮನೆಯಲ್ಲಿರುವ ತಗಣಿ ಚಿಕ್ಕಾಡುಗಳನ್ನು ಜೋಕುಮಾರನ ಬುಟ್ಟಿಯಲ್ಲಿ ಬಿಡುವುದು ಸಂಪ್ರದಾಯ. ಇಂತವುಗಳನ್ನು ಜೋಕುಮಾರ ನಾಶಮಾಡುತ್ತಾನೆಂದು ನಂಬಿಕೆ. ದವಸಧಾನ್ಯವನ್ನು ಕೊಟ್ಟದ್ದಕ್ಕೆ ಪ್ರತಿಯಾಗಿ

ಜೋಕುಮಾರನನ್ನು ಹೊತ್ತ ಹೆಂಗಸರು ಪ್ರಸಾದದ ರೂಪವಾಗಿ ಹುಳಿನುಚ್ಚು, ಬೇವಿನ ಸೊಪ್ಪನ್ನು ಕೊಡುವುದು ಪದ್ದತಿ.

ಜೋಕುಮಾರನಿಗೆ ಏಳು ದಿನ ಮಾತ್ರ ಆಯುಷ್ಯವೆಂದು ಅವನನ್ನು ಕುರಿತ ಹಾಡುಗಳು ವರ್ಣಿಸುತ್ತವೆ.

ಹುಟ್ಟಿದಾ ಏಳ್ದಿನಕ ಪತ್ನಾವ ತಿರುಗ್ಯಾನ
ದಿಟ್ನಾದೇವಿ ನಿನಮಗ1 ಕೊಮರಾಗ
ಬರೆದಾಳಾ ಸೆಟವಿಎಳ್ದಿನ
ಆರೇಳು ದಿನಕೆ ಆಳಿದನೆ ರಾಜ್ಯವ
ಸದಿಟ್ನಾದೇವಿ ನಿನಮಗ1 ಕೊಮರಾಗ
ಕೊಟ್ಟಾರ ಏಳು ದಿನಗಳು
ಅಳುವುತ ಸಿರಿತಾನು ಬಳಲುತಲಿ ಬಂದಾನು
ಅಳಕದಂಬಲಿ ತಡೆದಾವು1 ನಮ ಕೊಮರ
ಕಳೆದೇಳು ದಿನಕ ಮರಣಾವ್ವ

ಮೇಲಿನ ಪದ್ಯಭಾಗದಿಂದ ಜೋಕುಮಾರ ಹುಟ್ಟಿದ ಏಳು ದಿನಗಳಲ್ಲಿ ಪಟ್ಟಣವನ್ನು ತಿರುಗುತ್ತಾನೆ. ಆತ ದಿಷ್ಟಾ ದೇವಿಯ ಮಗ. ಹುಟ್ಟಿದ ಕೂಡಲೆ ತನ್ನ ತಾಯಿ ಕುಮಾರಿಯನ್ನೇ ಮೋಹಿಸಲು ಹೋದಾಗ ಆಕೆ ಕೋಪಗೊಂಡು ಮಗನ ತಲೆಯನ್ನು ಹೊಡೆದಳೆಂದೂ ಕಥೆಯುಂಟು.

ಜೋಕುಮಾರ ಮಳೆಯ ದೇವತೆಯಾಗಿರುವಂತೆಯೇ ಫಲದೇವತೆಯೂ ಆಗಿದ್ದಾನೆ. ಪುರುಷ ಜನನೇಂದ್ರಿಯವೇ ಎದ್ದು ಕಾಣುವಂತಿರುವ ಜೋಕುಮಾರನು ಮಕ್ಕಳನ್ನು ದಯಪಾಲಿಸುವ ದೇವರು ಎಂದು ಕೂಡ ಜನಪದರ ನಂಬಿಕೆ .ಈ ಕಾರಣದಿಂದಾಗಿಯೇ ಮಕ್ಕಳಿಲ್ಲದವರು ಜೋಕುಮಾರನನ್ನು ಪೂಜಿಸುವುದು ರೂಢಿಯಂತೆ ಕಾಣುತ್ತದೆ:

ಪುಂಡಿಯ ಸೊಪ್ಪಿಗೆ ಹೋದಳೆ ಹನುಮವ್ವ
ಕುಂಡಿಲ್ಲವಂತ ಅಳುತಾಳ1 ನಮಕೊಮರ
ಕುಂಡಿಮಾಡಿ ಮನೆಗೆ ಕಳುವ್ಯಾನ
ಬಸಲಿಂಗಿ ಸೊಪ್ಪಿಗೆ ಹೋದಾಳ ಹನುಮವ್ವ
ಬಸರಿಲ್ಲಂತ ಅಳುತಾಳಾ1 ನಮಕೊಮರ
ಬಸರ್ಮಾಡಿ ಮನಿಗೆ ಕಳುವ್ಯಾನ

ಈ ಪದ್ಯಗಳು ಜೋಕುಮಾರ ಒಬ್ಬ ಫಲ ಕೊಡುವ ದೇವತೆ ಎಂದು ದೃಢೀಕರಿಸುತ್ತವೆ.

ಬಹುಪಾಲು ಹಾಡುಗಳಲ್ಲಿ ಜೋಕುಮಾರನನ್ನು ಕಾಮುಕನಾಗಿ ವರ್ಣಿಸಿದ್ದರೆ ಕೆಲವು ಕಡೆ ಅವನೊಬ್ಬ ಮಳೆಯನ್ನು ದಯಪಾಲಿಸುವ ದೇವತೆಯಾಗಿಯೂ ಸಂಪತ್ತಿನ ದೇವತೆಯಾಗಿಯೂ ಚಿತ್ರಿತನಾಗಿದ್ದಾನೆ. ಮಳೆ ಬೀಳದೆ ಜನ ಕಂಗಾಲಾಗಿದ್ದ ಸಂದರ್ಭದಲ್ಲಿ ಜನರು ಜೋಕುಮಾರನನ್ನು ಪ್ರಾರ್ಥಿಸುತ್ತಾರೆ:

ಮಾಡಿದ ಪೈರು ಬಾಡಿ ಹೋಗುತಾವೆ
ತಾಯವ್ವ ಹಿಟ್ಟು ಕೊಡವಳ್ಳ1 ಶಿವರಾಯ
ಉತ್ತರಿ ಮಳೆಯ ಕರುಣಿಸೋ
ಬಿತ್ತಿದ ಪೈರು ಬತ್ತಿ ಹೋಗುತಾವೆ
ಹೆತ್ತವ್ವ ಹಿಟ್ಟು ಕೊಡವಳ್ಳ1 ಶಿವರಾಯ
ಅರಿದ್ರಾ ಮಳೆಯ ಕರುಣಿಸೋ

ರೈತಾಪಿಗಳ ಈ ಮೊರೆಯನ್ನು ಕೇಳಿ ಜೋಕುಮಾರ ನೀಲಿಕುದುರೆಯನ್ನು ಎರಿ ಸೆಲ್ಲೆಯನ್ನು ಬೀಸಿ ಮಳೆಯನ್ನು ಕರೆದ ಎಂಬ ವರ್ಣನೆಯನ್ನು ಈ ಸಂದರ್ಭದಲ್ಲಿ ನೆನೆಪಿಸಿಕೊಳ್ಳಬಹುದು:

ಕಟ್ಟೆಯ ಹತ್ತ್ಯಾನೆ ಹೊತ್ತುಗಳ ನೋಡ್ಯಾನೆ
ಎಯ್ರಾನೆ ನೀಲಕುದುರೆಯ1 ನಮ ಕೊಮರ
ಕೈ ಬೀಸಿ ಮಳೆಯ ಕರೆದಾನೆ.
ಎರಿಯ ಹತ್ತ್ಯಾನೆ ಯಾಳ್ಯೇನ ನೋಡ್ಯಾನ್
ಎಯ್ರಾನೆ ನೀಲಕುದುರೆಯ1 ನಮಕೊಮರ
ಸಲ್ಯೇವ ಬೀಸಿ ಕರೆದಾನೆ.

ಜೋಕುಮಾರನ ಆಚರಣೆ ಉತ್ತರ ಕರ್ನಾಟಕದಾದ್ಯಂತ ಸಣ್ಣಪುಟ್ಟ ವ್ಯತ್ಯಾಸಗಳೊಡನೆ ಪ್ರಚಲಿತದಲ್ಲಿದೆ. ಬಾದ್ರಪದ ಅಷ್ಟಮಿಯ ದಿನ ಕುಂಬಾರನ ಮನೆಯಲ್ಲಿ ಜೋಕುಮಾರನ ಮೂರ್ತಿಯನ್ನು ತಯಾರಿಸುವರು. ಗಂಗಾಮತದ ಹೆಣ್ಣುಮಕ್ಕಳು ಜೋಕುಮರನನ್ನು ಹೊತ್ತು ತಿರುಗುವರು. ಸ್ನಾನ ಮಡಿಯಿಂದ ಕುಂಬಾರನ ಮನೆಗೆ ಹೋಗಿ ಹತ್ತು ಸೇರು ಜೋಳ ಇಲ್ಲವೆ ಇಪ್ಪತ್ತೈದು ರೂಪಾಯಿ ಕೊಟ್ಟು ಪೂಜಿಸಿ ತಮ್ಮ ಮನೆಗೆ ತರುತ್ತಾರೆ. ತಂದ ಜೋಕುಮಾರನ ಮೂರ್ತಿಯನ್ನು ಪಡಸಾಲೆಯಲ್ಲಿಟ್ಟು ಪೂಜಿಸುತ್ತಾರೆ. ಜೋಕುಮಾರನ ತಲೆಗೆ ಕುಲಾವಿ ಕಟ್ಟಿ, ಸಣ್ಣ ಶಲ್ಯ ಹೊದಿಸಿ ಬಾಯಿಗೆ ಬೆಣ್ಣೆ ಹಚ್ಚುತ್ತಾರೆ. ಹಣೆಗೆ ಭಂಡಾರ(ಕುಂಕುಮ, ಅರಿಶಿನ) ಹಚ್ಚುತ್ತಾರೆ. ಸುತ್ತೆಲ್ಲಾ ಬೇವಿನ ಸೊಪ್ಪನ್ನು ಇಟ್ಟು ಪೂಜಿಸಿ ಊದಿನ ಕಡ್ಡಿಯಿಂದ ಬೆಳಗಿ, ಕಡುಬು, ಹಿಂಡಿಪಲ್ಯ, ರೊಟ್ಟಿ, ಅನ್ನ ಮುಂತಾದ ಪದಾರ್ಥಗಳನ್ನು ನೈವೇದ್ಯಕ್ಕೆ ಇಟ್ಟು ಪೂಜಿಸುತ್ತಾರೆ.

ಮರುದಿನ ಗೌಡರ ಮನೆಗೆ ಜೋಕುಮಾರನನ್ನು ಹೆಂಗಸರು ಹೊತ್ತುಕೊಂಡು ಹೋಗುತ್ತಾರೆ.ಮನೆಯಲ್ಲಿ ಜೋಕುಮಾರನಿಗೆ ಶಲ್ಯ ಹೊದಿಸಿ, ಜೋಳ ಇತ್ಯಾದಿ ದವಸಧಾನ್ಯವನ್ನು ಕೊಡುವರು. ಮನೆಯೊಡತಿಯು ಮೊರಕ್ಕೆ ಪ್ರಸಾದದ ರೂಪವಾಗಿ ನಾಲ್ಕಾರು ಕಾಳು ಜೋಳ, ಸ್ವಲ್ಪ ಬೇವಿನಸೊಪ್ಪು, ಸ್ವಲ್ಪ ಅರಸಿನ, ಕುಂಕುಮವನ್ನು ಹಾಕಿಸಿಕೊಳ್ಳುವಳು. ಅನಂತರ ಜೋಕುಮಾರನನ್ನು ಹೊತ್ತು ತಿರುಗುವ ಹೆಂಗಸರು ಬೇರೆ ಮನೆಗಳಿಗೆ ಹೋಗುವರು. ಮನೆ ಮನೆಗೆ ಜೋಕುಮಾರನನ್ನು ಹೊತ್ತು ತಿರುಗುವಾಗ ಹಾಡುಗಳನ್ನು ಹಾಡುತ್ತಾ ಅವರು ಕೊಟ್ಟ ದವಸಧಾನ್ಯವನ್ನು ತೆಗೆದುಕೊಂಡು ಬರುವರು. ಕೆಲವರು ಜೋಕುಮಾರನ ಬುಟ್ಟಿಯನ್ನು ಎತ್ತಿ ನೋಡಿ ತಮ್ಮ ಮನಸ್ಸಿನಲ್ಲಿರುವ ಆಶೆ ಕೈಗೂಡುವುದೋ ಇಲ್ಲವೋ ಎಂದು ಕೇಳುವುದು ರೂಢಿಯಲ್ಲಿದೆ. ಅವರ ಆಸೆಗಳು ಫಲಿಸುವಂತಿದ್ದರೆ ಬುಟ್ಟಿ ಹಗುರವಾಗಿಯೂ, ಆಸೆಗಳು ಕೈಗೂಡದಿದ್ದರೆ ಭಾರವಾಗಿಯೂ ಇರುವುದೆಂಬ ನಂಬಿಕೆ ಇದೆ. ಮಕ್ಕಳಾಗದೆ ಇರುವವರು ಜೋಕುಮಾರನಿಗೆ ಹರಸಿಕೊಳ್ಳುವುದೂ ಉಂಟು.

ಹೀಗೆ ಏಳು ದಿನಗಳವರೆವಿಗೆ ಬೇರೆಬೇರೆ ಓಣಿಗಳಲ್ಲಿ ತಿರುಗಾಡುತ್ತಾ ಊರನ್ನೆಲ್ಲ ಸುತ್ತುವರು. ಹುಣ್ಣಿಮೆಯಂದು ಜೋಕುಮಾರನನ್ನು ಪೂಜಿಸಿ ರಾತ್ರಿಯಾದ ಮೇಲೆ ಹೊಲೇರ ಓಣಿಯಲ್ಲಿಟ್ಟು ಬರುವರು. ಹೊಲೇರು ಅವನ ತಲೆ ಒಡೆಯುವರು. ಮತ್ತೆ ಕೆರೆ ಇಲ್ಲವೆ ಹಳ್ಳಕ್ಕೆ ಒಯ್ದು ಅಗಸರು ಬಟ್ಟೆ ಒಗೆಯುವ ಕಲ್ಲಿನ ಕೆಳಗೆ ಹಾಕುವರು. ಜೋಕುಮಾರನ ರುಂಡ ಮುಂಡಗಳು ಅಂಗಾತ ಬಿದ್ದರೆ ಮಳೆಬೆಳೆ ಚೆನ್ನಾಗಿ ಬರುತ್ತದೆ ಎಂದು ನಂಬಿಕೆ. ಬೋರಲಾಗಿ ಬಿದ್ದರೆ ಬರಗಾಲ ಬರುತ್ತದೆಂದು ನಂಬಿಕೆ. ಜೋಕುಮಾರನನ್ನು ಕುರಿತ ಹಾಡುಗಳಲ್ಲಿ ಮೇಲೆ ನಿರೂಪಸಿದ ಎಲ್ಲ ಕಥೆಗಳಿಗೂ ಆಧಾರ ದೊರೆಯುತ್ತವೆ.

**3.2.ಗುಳ್ಳವ್ವನ ಪೂಜೆ :**

"ಗುಳ್ಳವ್ವ" ಆಡು ಮಾತಿನಲ್ಲಿ "ಗೋಲವ್ವ" ಎಂದು ಉಳಿದುಕೊಂಡು ಬಂದಿದೆ. ಗುಳ್ಳವ್ವನ ಪೂಜೆಯು ಸಂಪೂರ್ಣವಾಗಿ ಜನಪದ ಆಚರಣೆಯಾಗಿದೆ. ಇವಳಿಗಾಗಿ ಪ್ರತ್ಯೇಕ ದೇವಸ್ಥಾನಗಳಿರುವುದಿಲ್ಲ. ಯಾವ

ಪುರಾಣಗಳಲ್ಲಿಯೂ ಗುಳ್ಳವ್ವನ ಪ್ರಸ್ತಾಪ ಬರುವುದಿಲ್ಲ. "ಗುಳ್ಳವ್ವ ದೇವರಲ್ಲ ಉಡುಕಿ ಗಂಡನಲ್ಲ" ಹಾಗೆಯೇ "ಗುಳ್ಳವ್ವನದು ಹರಿದರೇನು ಜೋಕನದು ಮುರಿದರೇನು" ಎಂಬ ಗಾದೆಗಳಿಂದಾಗಿ ಗುಳ್ಳವ್ವ ಸಾಮಾನ್ಯ ದೇವತೆ ಎಂದು ಭಾವಿಸಬಹುದು. ಮಾರಮ್ಮ ಎಲ್ಲಮ್ಮಗಳಿಗೆ ಹೆದರುವಂತೆ ಜನ ಗುಳ್ಳವ್ವನನ್ನು ಪೂಜಿಸಲು ಹೆದರುವುದಿಲ್ಲ. ಈ ಕಾರಣದಿಂದಾಗಿಯೇ ಗುಳ್ಳವ್ವನ ಬಗೆಗೆ ಜನ ಮುಕ್ತವಾಗಿ ಹಾಡುತ್ತಾರೆ; ಎಳೆಯ ಹೆಣ್ಣುಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದು ಈ ಆಚರಣೆಯ ವೈಶಿಷ್ಟ್ಯವಾಗಿದೆ. ಆದರೆ ಉತ್ತರ ಕರ್ನಾಟಕದ ಕೆಲವು ಕಡೆಗಳಲ್ಲಿ ಮಾತ್ರವೇ ಈ ಆಚರಣೆ ಚಾಲ್ತಿಯಲ್ಲಿದೆ.

ಆಷಾಡದ ಅಮವಾಸ್ಯೆಯಿಂದ ಶ್ರಾವಣದ ಅಮವಾಸ್ಯೆಯವರೆಗೆ ಬರುವ ಪ್ರತಿ ಮಂಗಳವಾರಗಳಲ್ಲಿ ಗುಳ್ಳವ್ವನನ್ನು ಪೂಜಿಸಲಾಗುವುದು. ಇದನ್ನು ಎರಡನೆಯ ಪ್ರಕಾರದ ಮಣ್ಣುಪೂಜೆಯೆಂದು ಕರೆಯುವರು. ಕೆಲವು ಊರುಗಳಲ್ಲಿ ಸೋಮವಾರ ಇಲ್ಲವೆ ಬುಧವಾರ ಪೂಜಿಸುವುದು ರೂಢಿ. ಆಷಾಡ ಮಾಸದ ಪ್ರತಿ ಮಂಗಳವಾರವನ್ನು ಗುಳ್ಳವ್ವನ ವಾರವೆಂದು ಕರೆಯುತ್ತಾರೆ. ಹೊಲಗಳಿಂದ ಅಥವಾ ಊರಿನ ಹೊರಗಿರುವ ಹುತ್ತದಿಂದ ಮಣ್ಣು ತರುತ್ತಾರೆ. ಭಾನುವಾರದ ದಿನ ಮಣ್ಣು ತಂದು ಗುಳ್ಳವ್ವನನ್ನು ನಿರ್ಮಿಸಿ ಸೋಮವಾರದಂದು ವಿಸರ್ಜಿಸಲು ತೆಗೆದುಕೊಂಡು ಹೋಗುತ್ತಾರೆ. ಇಲ್ಲವೆ ಸೋಮವಾರ ಮಣ್ಣು ತಂದು ಮಂಗಳವಾರ ಹೊಲಕ್ಕೆ ತೆಗೆದುಕೊಂಡು ಹೋಗಿ ಗುಳ್ಳವ್ವನನ್ನು ವಿಸರ್ಜಿಸಿ ಬರುತ್ತಾರೆ.

ಹೊಲಗಳಿಂದ ಇಲ್ಲವೆ ಹುತ್ತದಿಂದ ಮಣ್ಣು ತಂದು ಚೆನ್ನಾಗಿ ಕಲಸಿ ಮಣೆಯ ಮೇಲೆ ಮಣ್ಣಿನ ಗೋಲಾಕಾರದ ಉಂಡೆಯನ್ನು ಮಾಡಿ ಇಡುವರು. ಈ ರೀತಿಯಾಗಿ ಮಾಡಿದ ಮಣ್ಣಿನ ಉಂಡೆಯನ್ನು ಮೊದಲನೆಯ ವಾರದ ಗುಡ್ಡದ ಗುಳ್ಳವ್ವನೆಂದೂ ನಂತರ ಎರಡನೆಯ ವಾರ ನವಿಲಿನಾಕಾರವನ್ನು ಮಾಡಿ ಅದಕ್ಕೆ ನವಿಲು ಗುಳ್ಳವ್ವನೆಂದೂ ಕರೆಯುವರು. ಮೂರನೇವಾರ ಮನೆಯಾಕಾರವನ್ನು ಮಾಡಲು ನಾಲ್ಕು ಕಂಬಗಳನ್ನು ನಿಲ್ಲಿಸಿ ಮಣ್ಣಿನಿಂದ ಮನೆಯಂತೆ ಮಾಡುವರು.. ಅದರಲ್ಲಿ ಹೆಣ್ಣಿನಾಕಾರದ ಒಂದು ಪುಟ್ಟ ಗೊಂಬೆಯನ್ನು ಇಡುವರು. ಅದನ್ನು ಮನೆಯ ಗುಳ್ಳವ್ವ ಅನ್ನುವರು. ನಾಲ್ಕನೆಯವಾರ ಅಗಸಿ ಗುಳ್ಳವ್ವನೆಂದು ಮಣ್ಣಿನಿಂದ ಅಗಸಿ ಬಾಗಿಲು ಮಾಡಿ ಅದರೊಳಗೆ ಗೊಂಬೆಯನ್ನು ಕೂರಿಸುವರು. ಐದನೆಯ ವಾರ ಸೀಗೆ ಗುಳ್ಳವ್ವನೆಂದು ಒಂದು ಹೆಣ್ಣಿನ ಗೊಂಬೆಯನ್ನು ಮಾಡಿ ಮಣ್ಣಿನಿಂದಲೇ ಪಾತ್ರೆ, ಒಲೆ, ಹಂಚುಗಳನ್ನು ಮಾಡುವರು. ಇವುಗಳನ್ನು ಪ್ರತಿ ವಾರವೂ ಬಣ್ಣಗಳಿಂದ ಅಲಂಕರಿಸುವರು. ಆ ಗೊಂಬೆಗೆ ವಡವೆ ವಸ್ತ್ರಗಳನ್ನು ತೊಡಿಸಿ ಅಲಂಕರಿಸುವರು. ಅರಿವೆ, ಹೂವು, ಅವರೆ ಹೂವು, ಕಕ್ಕೆ ಹೂವು ಮುಂತಾದ ಆ ಕಾಲದಲ್ಲಿ ದೊರೆಯುವ ಎಲಾ ಬಗೆಯ ಹೂವುಗಳಿಂದಲೂ ಅಲಂಕರಿಸುವರು.

ಸಂಜೆಯ ಹೊತ್ತಿನಲ್ಲಿ ಗುಳ್ಳವ್ವನಿಗೆ ವಿಭೂತಿ, ಕುಂಕುಮ, ಹೂವು ಇತ್ಯಾದಿಗಳನ್ನು ಹಾಕಿ ಪೂಜಿಸುತ್ತಾರೆ.

ಹೆಣ್ಣು ಮಕ್ಕಳು ಆರತಿ ಬೆಳಗುತ್ತಾರೆ. ಪ್ರಸಾದಕ್ಕಾಗಿ ಇಟ್ಟ ಸಕ್ಕರೆಯನ್ನು ಎಲ್ಲರೂ ಹಂಚಿಕೊಂಡು ತಿನ್ನುವರು. ಇದೇ ಸಂದರ್ಭದಲ್ಲಿ ಗುಳ್ಳವ್ವನನ್ನು ಮಾಡಿರುವ ಎಲ್ಲಾ ಮನೆಯವರು ಹೋಗಿ ಹಾಡು ಹಾಡುತ್ತಾರೆ. ಮೂರನೆಯ ದಿನ, ಶಾವಿಗೆ, ರೊಟ್ಟಿ, ಚಪಾತಿ,ಮೊಸರನ್ನ, ಕಾಯಿಪಲ್ಯಗಳು, ಚಟ್ನಿ,ಇಡ್ಲಿ ಇತ್ಯಾದಿ ತಿಂಡಿ ಪದಾರ್ಥಗಳನ್ನು ಬುತ್ತಿ ಕಟ್ಟಿಕೊಂಡು ಹಳ್ಳಿ ಇಲ್ಲವೆ ಕೆರೆಯ ಕಡೆಗೆ ಹೋಗುತ್ತಾರೆ. ತಮ್ಮ ತಮ್ಮ ಗುಳ್ಳವ್ವನನ್ನು ಹೊತ್ತುಕೊಂಡು ಹೋಗಿ ಕೆರೆಯ ದಂಡೆಯಲ್ಲಿ ಮತ್ತೊಮ್ಮೆ ಕಾಯಿ ಕರ್ಪೂರದಿಂದ ಪೂಜೆ ಮಾಡುವರು. ತಾವು ತಂದಿರುವ ಅಡುಗೆ ನೈವೇದ್ಯವನ್ನು ತೋರಿಸುವರು. ನಂತರ ಗುಳ್ಳವ್ವನನ್ನು ನೀರಿನಲ್ಲಿ ವಿಸರ್ಜಿಸುತ್ತಾರೆ. ಎಲ್ಲರೂ ಒಟ್ಟಿಗೆ ಕುಳಿತುಕೊಂಡು ಊಟ ಮಾಡುವರು. ಕೆಲವು ಪ್ರದೇಶಗಳಲ್ಲಿ ಹಾಡುವುದರ ಜೊತೆಗೆ ಕೋಲಾಟ ಆಡುವುದುಂಟು.

**3.3. ಅರಲೆ ಬಸವನ ಪೂಜೆ :**

ನಮ್ಮ ರೈತಾಪಿಗಳು ನೂರರು ಜನಪದ ಸಂಪ್ರದಾಯಗಳನ್ನು ಉಳಿಸಿಕೊಂಡು ಬಂದಿದ್ದರೂ ಅವುಗಳನ್ನು ವಿವಿಧ ಋತುಮಾನಕ್ಕನುಗುಣವಾಗಿ, ವೈವಿಧ್ಯಮಯವಾಗಿ ಆಚರಿಸುತ್ತ ಬಂದಿರುವುದು ಗಮನಾರ್ಹ ಸಂಗತಿ. ಮಳೆಗಾಲದಲ್ಲಿ ಸಾಮಾನ್ಯವಾಗಿ ಮಣ್ಣಿನ ಪೂಜೆಗೆ ಸಂಬಂಧಿಸಿದಂತೆ ಆಚರಣೆಗಳು ನಡೆಯುತ್ತವೆ. ಅಂತಹವುಗಳಲ್ಲಿ ಅರಲೆಬಸವನ ಪೂಜೆಯು ಮಹತ್ವಪೂರ್ಣವಾದುದು. ದೇಜಗೌ ಹೇಳುವಂತೆ ರೈತನ ದೃಷ್ಟಿಯಲ್ಲಿ ಮಣ್ಣು ಎಂದೂ ಕೀಳಾದ ವಸ್ತುವಲ್ಲ, ಅದು ಸಂಪತ್ತನ್ನು ಹೆರುವ ಜೀವಶಕ್ತಿ. ಮಣ್ಣುಹೊನ್ನುಗಳೆರಡು ಆತನ ಪಾಲಿಗೆ ಅಭೇದ ವಸ್ತುಗಳು. ದುಡಿಯುವ ಬಾಳಿಗೆ ಮಣ್ಣೇ ಹೊನ್ನಾಗಿ ಪರಿಣಮಿಸುತ್ತದೆ. (ಉದ್ಧೃತ: ವೃಷಭೇಂದ್ರ ಸ್ವಾಮಿ.ಎಸ್.ಎಂ. 1987:67). ಮಣ್ಣ ಪೂಜೆಯು ಭೂಮಿತಾಯಿಯ ಪೂಜೆ ಎಂದೇ ಭಾವಿಸಿದ್ದಾರೆ. ಈ ಪೂಜೆಯು ಮಳೆಗಾಲದಲ್ಲಿ ವಿಶೇಷ ಮಹತ್ವದ್ದಾಗಿ ಕಾಣಿಸುತ್ತದೆ. ಮಳೆಗಾಲವು ಪ್ರಾರಂಭವಾದಾಗ ರೈತರು ತಮ್ಮ ಗದ್ದೆಯನ್ನು ಉಳುವುದಕ್ಕೆ ತೊಡಗುತ್ತಾರೆ. ಇಂತಹ ಸಮಯದಲ್ಲಿ ಊರಿನವರೆಲ್ಲ ಸಂತೋಷ, ಸಂಭ್ರಮಗಳಿಂದ ಇರುತ್ತಾರೆ. ಹೆಣ್ಣು ಮಕ್ಕಳಿಗೆ ಸಾಕಷ್ಟು ಸಮಯ ಇರುವುದರಿಂದ ಅವರು ವ್ರತ, ಪೂಜೆ ಇತ್ಯಾದಿಗಳಿಗೆ ಕೈಹಾಕುತ್ತಾರೆ. ಸಕಲ ಜೀವರಾಶಿಗಳಿಗೂ ಅನ್ನ ನೀಡುವ ಭೂಮಿತಾಯಿಗೂ ಬಸವಣ್ಣನಿಗೂ ರೈತರು ಕೃತಜ್ಞತೆಯನ್ನು ಅರ್ಪಿಸಲು ಅವುಗಳ ಪೂಜೆಯನ್ನು ಮಾಡುತ್ತಾರೆ.

ಒಟ್ಟಿನಲ್ಲಿ ಅರಲೆ ಬಸವನ ಪೂಜೆ ಉತ್ತರ ಕರ್ನಾಟಕದಲ್ಲಿ ಹೊಲಗದ್ದೆಗಳು ಹಸಿರು ತುಂಬಿ ಕಂಗೊಳಿಸುವ ಸಂದರ್ಭದಲ್ಲಿ ಆಚರಿಸುವ ಒಂದು ಸಂಪ್ರದಾಯ. ಹೆಣ್ಣು ಮಕ್ಕಳು ಜೇಷ್ಟ ಬಹುಳ ಅಮವಾಸ್ಯೆ ದಿನ, ಅರಲೆ ಮಂಟಪವನ್ನು ನಿರ್ಮಿಸಿ, ಅದರೊಳಗೆ ಮಣ್ಣಿನಿಂದ ಮಾಡಿದ ಬಸವಣ್ಣನನ್ನು ಇಟ್ಟು ಅದಕ್ಕೆ ಅಲಂಕಾರ ಮಾಡಿ ಕೆರೆ ಅಥವಾ ಹೊಲದಿಂದ ನೀರು ತಂದು ಹಾಡುಹೇಳುತ್ತಾ ಪೂಜೆ ಮಾಡುವರು. ಇದನ್ನು ಮೊದಲ ಮಣ್ಣಿನ ಪೂಜೆ

ಅಥವಾ ಮಣ್ಣೆತ್ತಿನ ಅಮವಾಸ್ಯೆ ಎಂದು ಕರೆಯುವರು. ಬಿಳುವಲದಲ್ಲಿ ಊರ ಮಡದಲ್ಲಿ ಮಣ್ಣಿನ ಬಸವನನ್ನು ಪೂಜಿಸುವ ರೂಢಿಯಿದೆ. ಈ ಸಮಯದಲ್ಲಿ ಹೆಣ್ಣು ಮಕ್ಕಳು ಆರತಿ ಬೆಳಗುತ್ತಾ ಕೋಲನ್ನು ಹಾಕುತ್ತಾ ಹಾಡುತ್ತಾರೆ. ಹೀಗೆ ಮಣ್ಣಿನ ಬಸವನನ್ನು ಅರಲೆಯ ಮಂಟಪದಲ್ಲಿ ಪೂಜಿಸುವುದರಿಂದ ಇದಕ್ಕೆ ಅರಲೆಬಸವನ ಪೂಜೆ ಎಂದು ಕರೆಯುತ್ತಾರೆ.

ಉತ್ತರ ಕರ್ನಾಟಕದಲ್ಲಿ ಜೇಷ್ಟ ಬಹುಳ ಅಮವಾಸ್ಯೆಗೆ ಮಣ್ಣೆತ್ತಿನ ಅಮವಾಸ್ಯೆ ಎಂದು ಕರೆಯುತ್ತಾರೆ. ಈ ಹಬ್ಬದಂದು ಊರ ಸಮೀಪದ ಕೆರೆ, ಹಳ್ಳ ಇಲ್ಲವೆ ಹೊಳೆಯ ತೀರದ ಮಣ್ಣಿನಿಂದ ಎತ್ತುಗಳನ್ನು ಮಾಡಿ ಜಗಲಿಯ ಮೇಲೆ ಇಟ್ಟು ಪೂಜಿಸುತ್ತಾರೆ. ಮಣ್ಣು ನಮಗೆ ಅನ್ನ ನೀಡುವ ಭೂಮಿತಾಯಿಯ ಪ್ರತೀಕ. ಅಂದು ಸಂಜೆ ಹೆಣ್ಣುಮಕ್ಕಳೆಲ್ಲ ಗುಂಪು ಕೂಡಿಕೊಂಡು ಊರಮಠದಲ್ಲಿ ಬಸವನಿಗೆ ಸಾಮೂಹಿಕ ಪೂಜೆ ನಡೆಸಿ, ಆರತಿ ಬೆಳಗಿ ಕೋಲಾಟದ ಹಾಡುಗಳನ್ನು ಹಾಡುತ್ತಾರೆ. ಉದಾಹರಣೆಗಾಗಿ:

ಒಂದು ಸುತ್ತಿನ ಕ್ವಾಟೆ1 ಅದರಾಗ
ಚಂದ ಕುಂತಾನ ಬಸವ
ಬಸವನ ಪಾದಕ ಹೊಸ ಮುತ್ತಹೊಸಗೆಜ್ಜೆ
ಬಸವಕ ಬಸವೆನ್ನಿರೆ
ಬಸವನ ಪಾದಕ ಶರಣೆನ್ನಿರೆ11

ಎರಡು ಸುತ್ತಿನ ಕ್ವಾಟೆ1 ಅದರಾಗ
ಇಡ್ಡಿಕುತ್ತಾನ ಬಸವ

ಬಸವನ ಪಾದಕ ಹೊಸಮುತ್ತ ಹೊಸಗೆಜ್ಜೆ
ಬಸವಕ ಬಸವೆನ್ನಿರೆ11

(ಗದ್ದಗೀಮಠ, ಬಿ.ಎಸ್. :1963:141)

ಬಸವನನ್ನು ಕುರಿತ ಹಾಡುಗಳು ಹೀಗೆ ಹತ್ತು ಸುತ್ತಿನ ಕೋಟೆಯವರೆಗೆ ಮುಂದುವರೆಯುತ್ತದೆ. ಈ ಹಾಡುಗಳನ್ನು ಹಾಡುತ್ತಾ ಹೆಣ್ಣುಮಕ್ಕಳು ಕೈ ಚಪ್ಪಾಳೆ ಹಾಕುತ್ತ ಬಸವನಿಗೆ ಪ್ರದಕ್ಷಿಣೆ ಹಾಕುವರು. ಹಿಮ್ಮೇಳ ಮುಮ್ಮೇಳದೊಂದಿಗೆ ಪದಗಳು ಮುಂದುವರೆಯುತ್ತವೆ.

ಅರಲೆಬಸವನ ಪೂಜೆಯನ್ನು ಕರ್ನಾಟಕದಲ್ಲಿ ಮಾತ್ರವಲ್ಲದೆ ನೆರೆಹೊರೆಯ ರಾಜ್ಯದಲ್ಲಿಯೂ ಆಚರಿಸುವುದು ಕಂಡುಬಂದಿದೆ. ಆಂದ್ರಪ್ರದೇಶದಲ್ಲಿ ಎದ್ದುಲ ಅಮವಾಸ್ಯೆ ಎಂದೂ, ಮಹರಾಷ್ಟ್ರದಲ್ಲಿ ಪೆ‍ೀಳಾಸಣ ಎಂದೂ ಕರೆಯುತ್ತಾರೆ. ಇದರ ಅರ್ಥ ಕೂಡ ಎತ್ತಿನ ಪೂಜೆ ಎಂದೇ ಆಗಿದೆ. ಈ ಪೂಜೆಯ ಉದ್ದೇಶ ಬೆಳೆ ಸಮೃದ್ಧವಾಗಿ ಬರಲಿ ಎನ್ನುವುದೇ ಆಗಿದೆ.

**3.4.ತಾರ್ಲೆ ಆಚರಣೆ:**

ವ್ಯವಸಾಯಕ್ಕೆ ಸಂಬಂಧಿಸಿದ ಕರಾವಳಿ ಪ್ರದೇಶ ಆಚರಣೆಗಳಲ್ಲಿ ಮುಖ್ಯವಾದದ್ದು ತಾರ್ಲೆ ಆಚರಣೆ. ಇದು ಮಳೆಯನ್ನು ಕುರಿತ ಆಚರಣೆಯಾಗಿದೆ.

ಕರಾವಳಿಯ ರೈತಾಪಿಗಳು ಒಕ್ಕಲುತನಕ್ಕೆ ಮಳೆಯನ್ನೇ ಅವಲಂಬಿಸಿದ್ದಾರೆ. ಬೆಳೆಗೆ ಅಗತ್ಯವಿದ್ದಷ್ಟು ಮಳೆಯಾಗದೇ ಹೋದ ಸಂದರ್ಭದಲ್ಲಿ ರೈತಾಪಿಗಳು ವರುಣನ ಕೃಪೆಗಾಗಿ ಕಾಯಬೇಕಾಗುತ್ತದೆ. ಮಳೆ ಇ‍ಲದೆ ಬೆಳೆ ಎಲ್ಲ ಒಣಗತೊಡಗಿದಾಗ ಜನರ ಸಂಕಟ ನಿವಾರಣೆಗಾಗಿ ಹಾಲಕ್ಕಿ ಒಕ್ಕಲಿಗರು ಬಯಲಲ್ಲಿ ಸವi ಸಂಖ್ಯೆಯಲ್ಲಿ ಸೇರುತ್ತಾರೆ. ಒಬ್ಬರ ಕೈಯನ್ನು ಮತ್ತೊಬ್ಬರು ಹಿಡಿದುಕೊಂಡು ವೃತ್ತಾಕಾರವಾಗಿ ನಿಲ್ಲುತ್ತಾರೆ. ನುರಿತ ಹಾಡುಗಾರ್ತಿಯೊಬ್ಬಳು ಹಾಡನ್ನು ಹೇಳಿ ಮುಗಿಸಿದ ನಂತರ ಉಳಿದವರು ನಿಂತ ಸ್ಥಳದಿಂದ ಮುಂದಕ್ಕೆ ಹಾರಿ ಬಾಗಿ ಪುನಃ ಹಿಂದಕ್ಕೆ ಜೀಕಿ ನಿಂತುಕೊಂಡು ತಾರ್ಲೆ ಎಂದು ಎಲ್ಲರೂ ಗಟ್ಟಿಯಾಗಿ ಹೇಳುತ್ತಾರೆ. ಹಾಡುಗಾರ್ತಿ ಹಾಡಿನ ಒಂದುಂದೊ ಸೊಲ್ಲನ್ನು ಹೇಳುತ್ತಾ ಮುಂದುವರೆಸಿದಂತೆ ಉಳಿದ ಹೆಂಗಸರು ತಾರ್ಲೆ ಹಾಕಿ ಕುಣಿಯುವುದರಿಂದ ಇದು ತಾರ್ಲೆ ಕುಣಿತವಾಯಿತೆಂದು ನಂಬಲಾಗಿದೆ. ಮೊದಲು ಮಳೆ ತರಲು (ತರಲೆ ತಾರಲ್ ತಾರ್ಲೆ) ವರುಣ ದೇವತೆಯನ್ನು ಸ್ತುತಿಸುವ ಹಾಡನ್ನು ಹೇಳುವ ಸಂಪ್ರದಾಯವಿದ್ದಂತೆ ಕಾಣುತ್ತದೆ:

ಚಣಮೊಳೆ ಹೂಯ್ಯಲೆ ಚಣಕೆರೆ ತುಂಬಲೆ
ಬಯ್ಯೀಗೊಳೆಲ್ಲ ಹಯ್ಯಾದೊ1 ತಾರ್ಲೆ
ಜಾಂಜೀಯ ಬೀರೂ ತಳಮಳಗೊಂಡೇ
ದೇವತ್ತಗೋಳಾ ಮದವೀಯೋ1 ತಾರ್ಲೆ

ಮೇಲೆ ಉದಾಹರಿಸಿದ ಹಾಡಿನಲ್ಲಿ ಮಳೆ ಮತ್ತು ಬೆಳೆ ಸಮೃದ್ಧಿಯ ಹಾರೈಕೆ ಇರುವುದನ್ನು ಕಾಣಬಹುದು. ಎಲ್.ಜಿ. ಭಟ್ಟರು ಸಂಗ್ರಹಿಸಿದ ತಾರ್ಲೆ ಹಾಡುಗಳಲ್ಲಿ ಮಳೆಯ ಬರುವಿಕೆಯನ್ನು ಹಾಗೆಯೇ ಕೃಷಿ ಸಮೃದ್ಧಿಗೆ ಸಂಬಂಧಿಸಿದ ವಸ್ತುವಿದೆ. ಆದರೆ ಇಲ್ಲಿ ಈ ಹಾಡುಗಳನ್ನು ಕುಣಿಯುತ್ತ್ತ ಹಾಡುವುದಿಲ್ಲ. ಗದ್ದೆಯ ಬಯಲಲ್ಲಿ ಲೋಕೋದ್ಧಾರಕ್ಕಾಗಿ ತಾರ್ಲೆ ಹಾಡಲು ಊರಿನ ಗೌಡನಿಂದ ವೀಳ್ಯವನ್ನು ಹಿಡಿದ ಹಾಡುಗಾರ್ತಿಯರು ಹಸೆ ಹಾಸಿಕೊಡು ಹಾಡುತ್ತಾರೆ. ಸಮ ಸಂಖ್ಯೆಯಲ್ಲಿ ಹಾಡು ಹಾಡಬಾರದೆಂಬ ನಿಷೇಧವಿದೆ. ಈ ಮೇಲಿನ ಹಾಡುಗಳಲ್ಲಿ ತನ್ನ ದೇವರ ಭಕ್ತಿಗೆ ಉದ್ದು, ಗೊಂಡೆ ಬಿತ್ತುವುದು. ತುಲಸಿ, ಬಿದಿರು ನೆಡೆವ ಪ್ರಸ್ತಾಪ ಸಾಮಾನ್ಯವಾಗಿ ಕಂಡುಬರುತ್ತದೆ. ಬಿತ್ತಿದ ಬೆಳೆ ಸಮೃದ್ಧವಾಗಿ ಬೆಳೆಯುವ ಸಲುವಾಗಿ ನಿರೋ ನಿರೋ ಎಂದು ಕೂಗುವ ತಳಮಳದ ಧ್ವನಿ ಇದೆ:

ಹಯ್ತು ಹರನೂಯ್ದ1 ಶೀತೇನ ತಿರುಗೊಯ್ದ
ಶ್ವಾತಿರಾಜುನ ಕೊಂಡೊಯ್ದ1 ಹೊಯ್ಲಿಲ್ಲ ಮಾಲೆಗಾಲ
ಮಾಬ್ಲೋರ ಮನೆ ಮ್ಯೆನೆ1 ಹೊಯ್ಯೆಂದ್ರೆ ಹೊಯ್ಯಾ
ಮಾಲೆಗಾಲ
ನಿಲ್ಲೆಂದ್ರೆ ನಿಲ್ಲೊ ಮಾಲೆಗಾಲ1 ಲೀಗೇಕೆಲಿನ್ನೂ ಬರಲಿಲ್ಲೋ1

ಎಂಬುದಾಗಿ ಮಳೆಯನ್ನು ಕುರಿತು ಸ್ತುತಿಸುತ್ತಾರೆ. ಮಳೆ ಬಂದರೆ ಬೆಳೆಯು ಸಮೃದ್ಧವಾಗಿ ಬೆಳೆದು ರೈತರ ಬದುಕು ಹಸನಾಗುತ್ತದೆ ಎಂದು ಅವರ ಆಶಯ.

ಮೇನನ ರಾಜುದಲ್ಲಿ ಗುಡುಗಿ ಮಾಲುಗಾಲಯ್ತೋ
ಕೆಲುಗೀನ ರಾಜುದಲ್ಲಿ ಹರಿನಗಶ1 ಕಟ್ಟುವಾಗೆ ಗಂಗೆ ಕೋಡೀಲಿ ಹಣಿನೀರು1

ಮಳೆ ಬಂದು ಮನಸ್ಸು ತಣಿಯುತ್ತದೆ. ಬಿತ್ತಿದ ಬೆಳೆಬೆಳೆದು ಸುಖ ಸಮೃದ್ಧಿ ತರುತ್ತವೆ. ಮಗಳು ಮದುವೆ ವಯಸ್ಸಿಗೆ ಬರುತ್ತಾಳೆ. ಅವಳು ಸಿಂಗರಿಸಿಕೊಂಡು,ಹೂ ಮುಡಿದು ದೇವರಿಗೆ ನಮಿಸಿ ಅಪ್ಪನ ಕಾಲಿಗೆರಗಿ ಆಶೀರ್ವಾದ ಪಡೆಯುತ್ತಾಳೆ, ಆಕಾಶಕ್ಕೆ ಕೈಮುಗಿಯುತ್ತಾಳೆ:

ಆಕಾಶಕ್ಕೆ ಕಯ್ಯಮುಗ್ವವೆಲ್ಯದಲ್ಲಿ
ಗುಡುಗು ಮಿಂಚೆಂಬ ವಾದ್ಯಬಂತು
ಆಕಾಶದಲ್ಲಿ ಗುಡುಗುಗರನಾಲು ಹೊಡೆದು
ಚಕಚಕಯೆಂಬ ಲಾರುತೀಯೆ ಬೆಲುಗೀರು
ಬರಬರನೆ ಮೊಲುಗಾಲು ಶುರುವಾಯ್ತು
ಬರಬರನೆ ಮಳೆರಾಯ ಬರ್ವ ಯಾವ್ಯಾದಲ್ಲಿ
ಹಕ್ಕರಣೆ ನೀರು ಕುಡುದೀವು
ಗೌಡ್ಲೂಲ್ ಮಕ್ಳು ಹೊಡುಕೆ ಹೊಟೇರು

ಈ ರೀತಿಯಾಗಿ ಕರಾವಳಿಯಲ್ಲಿ ಇಂದಿಗೂ ಮಳೆ,ಬೆಳೆಗಾಗಿ ಹಾರೈಸುವ ಹಾಡುಗಳನ್ನು ಹಾಡುವ ಸಂಪ್ರದಾಯ ಮುಂದುವರಿದುಕೊಂಡು ಬಂದಿದೆ.

ಮತ್ತೆ ಕೆಲವು ಪ್ರದೇಶಗಳಲ್ಲಿ `ತಾರ್ಲೆ' ಎಂಬ ಸಮೂಹ ಧ್ವನಿಗೆ ಬದಲಾಗಿ `ದುಮಸಾಯ್ಲೋ' ಇಲ್ಲವೇ `ದುಮಸಾಲೇ' ಪಲ್ಲವಿಯನ್ನು ಹಾಡುವುದುಂಟು (ಚನ್ನಬಸಪ್ಪ. ಗೊ.ರು:1977:144). ಇದಕ್ಕೆ `ದುಮಸಾಲೆ' ಕುಣಿತವೆಂದು ಕರೆಯುತ್ತಾರೆ. ಪ್ರಾಚೀನ ಕಾಲದಲ್ಲಿ ಕೆಲವು ಪ್ರದೇಶಗಳಾಲ್ಲಿ ಹೆಂಗಸರು ನಿರ್ಜನ ಬೆಟ್ಟಕ್ಕೆ ಹೋಗಿ ಅಲ್ಲಿ ಬೆತ್ತಲಾಗಿ ನಿಂತು `ತಾರ್ಲೆ' ಹಾಕೆ ಕುಣಿಯುವುದು ಇದ್ದುದಾಗಿ ತಿಳಿಯುತ್ತದೆ. ಇದು ವರುಣ ದೇವತೆಯನ್ನು ಹಾಡು ಮತ್ತು ಕುಣಿತದ ಮೂಲಕ ತೃಪ್ತಿಪಡಿಸಿ ಅವನನ್ನು ಒಲಿಸಿಕೊಳ್ಳುವ ಕ್ರಮ. ಆಗ ವರುಣ ದೇವತೆ ಆ ಹೆಂಗಸರ ನಗ್ನತೆಯಿಂದ ರೋಮಾಂಚಿತನಾಗಿ ಮಳೆಯ ಧಾರೆಯನ್ನು ಸುರಿಸುತ್ತಿದ್ದನಂತೆ.

ಹೀಗೆ ಹೆಂಗಸರು `ತಾರ್ಲೆ' ಹಾಕಿ ಕುಣಿದರೆ ಮಳೆ ಬಂದೇ ಬರುವುದೆಂಬ ಏಕಮಾತ್ರ ನಂಬಿಕೆಯಿಂದ ಹಾಲಕ್ಕಿ ಜನರು ಈ ಕುಣಿತವನ್ನು ಮಾಡುತ್ತಾರೆ. ಹಿಂದೆ ಏಳು ರಾತ್ರಿ ಏಳು ಹಗಲು ಕುಣಿದು ಮಳೆ ಕರೆಯುವ ಪದ್ಧತಿ ಇತ್ತಂತೆ. ಒಟ್ಟಿನಲ್ಲಿ ಈ ಆಚರಣೆ ಮಳೆಯನ್ನು ಕುರಿತ ಸ್ವತಂತ್ರ ಆಚರಣೆಯಾಗಿದೆ.

ತಾರ್ಲೆ ಕುಣಿತವು ಹಾಲಕ್ಕಿ ಒಕ್ಕಲಿಗರ ಹೆಣ್ಣುಮಕ್ಕಳ ಒಂದು ಪ್ರದರ್ಶನಾತ್ಮಕ ಕಲೆ. ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶಗಳಲ್ಲಿನ ಹಾಲಕ್ಕಿ ಹೆಣ್ಣು ಮಕ್ಕಳು ಮಳೆ ಬಾರದಿದ್ದಾಗ ಈ ಕುಣಿತವನ್ನು ಅವರ ಹಾಡಿಗಳಲ್ಲಿ ಪ್ರದರ್ಶಿಸುತ್ತಾರೆ. ಸಾಮಾನ್ಯವಾಗಿ ಕೇರಿಯ ಹೆಂಗಸರೆಲ್ಲಾ ವರ್ತುಲಾಕಾರವಾಗಿ ನಿಂತು ಒಬ್ಬರ ಕೈಯನ್ನು ಒಬ್ಬರು ಹಿಡಿದುಕೊಂಡು ಮಂಡಲಾಕಾರದಲ್ಲಿ ಸುತ್ತ ತೊಡಗುತ್ತಾರೆ. ಹಾಡುಗಾರ್ತಿಯೊಬ್ಬಳು ಹಾಡಿನ ಮೊದಲ ಸೊಲ್ಲೊಂದನ್ನು ಹೇಳುತ್ತಾಳೆ. ಕೂಡಲೇ ಉಳಿದವರು ಮುಂದಕ್ಕೆ ಬಾಗಿ ಪುನಃ ಹಿಂದಕ್ಕೆ ನಿಂತು ತಾರ್ಲೆ ಎಂದು ಸಾಮೂಹಿಕವಾಗಿ ಹಾಡುತ್ತಾರೆ. ಕೆಲವು ಪ್ರದೇಶಗಳಲ್ಲಿ ಈ ತಾರ್ಲೆಯ ಬದಲಿಗೆ "ದುಮ್ ಸಾಲ್ಯೋ, ದುಮ್ ಸಾಲೆ" ಎಂದು ಹೇಳುತ್ತಾರೆ. ಈ ಕುಣಿತದ ಒಟ್ಟು ಸ್ವರೂಪವನ್ನು ಗಮನಿಸಿದರೆ ಅದರ ಹಿಂದೆ ಸಮೃದ್ಧಿಯ ಕಲ್ಪನೆಯಿರುವುದು ವೇದ್ಯವಾಗುತ್ತದೆ. ಈ ಕುಣಿತದ ಸಂದರ್ಭದ ಮತ್ತೊಂದು ವಿಶೇಷವೆಂದರೆ "ಅಣುಕು ಹಿಂಡು ಮದುವೆ" ಹಾಗೂ "ಬಿದಿರ ಹಿಂಡೂ ನಡುವೆ" ಎಂಬ ಎರಡು ಆಚರಣೆಗಳನ್ನು ಮಾಡುತ್ತಾರೆ. ಅಣುಕು ಮದುವೆ ಭೂಮಿ ಆಕಾಶಗಳ ಮಿಲನದ ಹಾಗೂ ಆ ಮೂಲಕ ಆ ಭೂಮಿಗೆ ಮಳೆಯ ಸ್ಪರ್ಶದ ಸಂಕೇತವಾದರೆ, ಉತ್ತದೆ ಬಿತ್ತದೆ ದೈತ್ಯವಾಗಿ ಬೆಳೆಯುವ "ಬಿದಿರು" ಸಮೃದ್ಧಿಯ ಸಂಕೇತವಾಗಿರುತ್ತದೆ.

**3.5 : ಭೂಮಿಹುಣ್ಣಿಮೆ :**

ಇದು ವ್ಯವಸಾಯ ಸಂಬಂಧಿಯಾದ ಒಂದು ಆಚರಣೆ. ಇದು ಮಲೆನಾಡ ಒಕ್ಕಲಿಗರಿಗಷ್ಟೇ ಅಲ್ಲದೆ ಶೂದ್ರ ಸಮುದಾಯಕ್ಕೇ ವಿಶಿಷ್ಟವಾದ ಹಬ್ಬ. ದೀಪಾವಳಿ ಹಬ್ಬಕ್ಕೆ ಹದಿನೈದು ದಿನಗಳು ಹಿಂದೆ ಬರುವಂತದ್ದು.ಈ ಹಬ್ಬ ಮಾಡುವುದಕ್ಕಾಗಿ ಕೆಲವು ದಿನಗಳಿಂದಲೂ ತಯಾರಿ ನಡೆಸುತ್ತಾರೆ. ಭತ್ತದ ಗದ್ದೆಗಳು ಹೊಡೆ ಬರುವ ಕಾಲ ಅದು. ಕೆಲವು ಪ್ರದೇಶಗಳಲ್ಲಿ ಭತ್ತ ಕಾಯಿ ಆಗುತ್ತಿರುತ್ತದೆ. ಭೂಮಿತಾಯಿ ತುಂಬು ಗರ್ಭಿಣಿಯಾಗಿದ್ದಾಳೆ ಎನ್ನುವುದು ರೈತಾಪಿಗಳ ತಿಳುವಳಿಕೆ. ಸಮಾನ್ಯವಾಗಿ ಹೆಣ್ಣು ಗರ್ಭಿಣಿಯಾದ ಸಂದರ್ಭದಲ್ಲಿ ಹೇಗೆ ಬಯಕೆ ತೀರಿಸುವಂತಹ ಪ್ರಸಂಗ ಬರುತ್ತದೋ ಅಂತೆಯೇ ಭೂಮಿತಾಯಿಯು ಗರ್ಭದರಿಸಿದಾಗ ಅವಳ ಬಯಕೆ ತೀರಿಸಬೇಕಾಗುತ್ತದೆ ಎಂದು ಜನ ತಿಳಿಯುತ್ತಾರೆ.

ಈ ಹಬ್ಬದ ಸಂದರ್ಭದಲ್ಲಿ `ಹೆಗ್ಗಸ' ಎಂಬ ಒಂದು ಜಾತಿಯ ಕಸುವಿನ ದಡಿಯನ್ನು ತಂದುತುಂಡುಮಾಡಿ ಒಣಗಿಸುತ್ತಾರೆ. ಹುಣ್ಣಿಮೆಯ ಹಿಂದಿನ ದಿನ `ಹೆರಕುವ ದಿನ' ಅಡುಗೆ ಮಾಡುವ ಹೆಂಗಸರು ರಾತ್ರಿ ಎಂಟು ಘಂಟೆಗೆ ಸ್ನಾನ ಮಾಡಿಕೊಂಡು ಅಡುಗೆ ಪ್ರಾರಂಭಿಸಿದರೆ ಬೆಳಗಿನ ಜಾವ ನಾಲ್ಕು ಘಂಟೆಯವರೆಗೂ ಅಡುಗೆ ಮಾಡುತ್ತಿರುತ್ತಾರೆ. ಅವರು ಆ ರಾತ್ರಿ ಮಲಗಬಾರದು. ಆ ಹೆಂಗಸರು ಮಲಗಿದರೆ ಗದ್ದೆಯಲ್ಲಿ ಭತ್ತ ಜೊಳ್ಳಾಗುತ್ತದೆ ಎಂಬ ನಂಬಿಕೆಯು ಪ್ರಚಲಿತವಾಗಿದೆ. ಈ ಭೀತಿಯಿಂದಲೇ ಜನರು ಬೆಳಿಗ್ಗೆ ಸೂರ್ಯೋದಯಕ್ಕೆ ಮುಂಚೆ ಪೂಜೆ ಮಾಡಿ ಮುಗಿಸಿ ಅನ್ನವನ್ನು ಗದ್ದೆಯ ಸುತ್ತಲೂ ಎರಚುತ್ತಾರೆ. ಸೂರ್ಯೋದಯವಾದರೆ ಒಳ್ಳೆಯದಲ್ಲ ಎಂಬ ನಂಬಿಕೆ ಪ್ರಚಲಿತವಾಗಿದೆ. ಹಿಂದಿನ ದಿನ ಮನೆಯನ್ನು ಸುಣ್ಣ ಬಣ್ಣಗಳಿಂದ ಸಾರಿಸಿ ಶುದ್ಧಗೊಳಿಸುತ್ತಾರೆ. ಗಂಡಸರು ಪೂಜೆಯ ಹಿಂದಿನ ದಿನ ಸಂಜೆ ಗದ್ದೆಗೆ ಹೋಗಿ ಹೊಡೆ ತುಂಬಿ ನಿಂತಿರುವ ಪೈರಿನ ಹತ್ತಿರ ಒಂದು ಬದುವಿನ ಮೇಲೆ ಬಾಳೆ ಕಂಬ, ಕಬ್ಬು, ಮಾವಿನ ಸೊಪ್ಪಿನ ತೋರಣ ಕಟ್ಟಿ ಸಿಂಗರಿಸುತ್ತಾರೆ. ಅದರಡಿಯಲ್ಲಿ ಮೂರು ಮಣ್ಣಿನ ಮುದ್ದೆಗಳನ್ನು ಮಾಡಿಟ್ಟು ಆ ಮಣ್ಣಿನ ಮುದ್ದೆಗಳಿಗೆ ಒಂದೊಂದು ಮಾವಿನ ಎಲೆ ಸುರಿದಿಟ್ಟು ಬರುತ್ತಾರೆ.

ಭೂಮಿತಾಯಿಗೆ ಬಯಕೆ ತೀರಿಸುವ ಸಂದರ್ಭವಿದು. ಭೂಮಿತಾಯಿ ಪೂಜೆಯೇ ಈ ಹಬ್ಬದ ವಿಶೇಷ. ಹಬ್ಬದ ಹಿಂದಿನ ದಿನವೇ ಕಾಡಿಗೆ ಹೋಗಿ ಅರವತ್ತು ಬಗೆಯ ಸೊಪ್ಪು ಮತ್ತು ನೆಲಗೆಣಸುಗಳನ್ನು ತರುತ್ತಾರೆ. ಅದರಿಂದ ಬೆರಕೆ ಸೊಪ್ಪಿನ ಪಲ್ಯವನ್ನು ಮಾಡುತ್ತಾರೆ.

ಹೆಂಗಸರು ಅಕ್ಕಿಯನ್ನು ಒಣಗಿಸಿಟ್ಟು ಕೆಸುವಿನ ದಡಿಯನ್ನು ರುಬ್ಬಿ ಕೊಟ್ಟೆ ಕಡುಬು ಮಾಡುತ್ತಾರೆ. ಅದರ ಜೊತೆಗೆ ಎಂಟು ಹತ್ತು ಜಾತಿಯ ತರಕಾರಿ ಪಲ್ಯವನ್ನು ಮಾಡಿ ನೆಲಗೆಣಸೆಂಬ ಒಂದು ಜಾತಿಯ ಗೆಣಸನ್ನು

ಕಾಡಿನಿಂದ ಕಿತ್ತು ತಂದು ಬೇಯಿಸಿ ಹಾಲು, ಬೆಲ್ಲ, ತುಪ್ಪ ಹಾಕಿ ತಿನ್ನುತ್ತಾರೆ. ಇದಲ್ಲದೆ ಚೆಂಡುಹೂವಿನ ಕೋಸಂಬರಿ, ಮಜ್ಜಿಗೆ ಅಂಬಲಿ, ಹಾಲಂಬ, ಬೆಲ್ಲದ ಹಾಲಿನ ಹಿಟ್ಟು ವಗೈರೆಯನ್ನು ಮಾಡುತ್ತಾರೆ.

ಮಾರನೆಯ ದಿನ ಬೆಳಗಿನ ಜಾವ ನಾಲ್ಕು ಘಂಟೆಗೆ ಎದ್ದು ಮನೆಮಂದಿಯೆಲ್ಲ ಸ್ನಾನಮಾಡಿ ಮಡಿಬಟ್ಟೆ ಧರಿಸಿ ಭೂಮಿ ಪೂಜೆಗೆ ಹೋಗಲು ಸಿದ್ಧತೆ ನಡೆಸುತ್ತಾರೆ. ಎಡೆಪದಾರ್ಥಗಳನ್ನು ಸಿದ್ಧಪಡಿಸಿದ ಸ್ತ್ರೀ ಮನೆಯೊಳಗೆ ಒಂದು ಹಣತೆಯನ್ನು ಹಚ್ಚಿ ಆ ದೀಪದ ಮುಂದೆ ದೊಡ್ಡ ಗೆರಸಿರೊಂದನ್ನಿಟ್ಟು ಮಾಡಿದ ಭಕ್ಷ್ಯಗಳನ್ನೆಲ್ಲಾ ಬಡಿಸಿ ಆಮೇಲೆ ಎಲ್ಲವನ್ನು ಕಲಸಿ `ಬಳಿ' ಮಾಡಿ ಕುಕ್ಕೆಯಲ್ಲಿ ತುಂಬಿಬಿಡುತ್ತಾಳೆ. ಎಲ್ಲಾ ಅನ್ನವನ್ನು ಕಲಸಿ ಎರಡೋ ಮೂರೋ ಬುಟ್ಟಿಗಳಿಗೆ ಅನ್ನ ತುಂಬಿಕೊಂಡು ಗದ್ದೆಗೆ ಹೋಗುತ್ತಾರೆ. ಜೊತೆಗೆ ಒಂದು ಅಡಿಕೆ ಹಿಂಗಾರ(ಹೂವು) ಮತ್ತು ಮಾವಿನ ಎಲೆಯ ಒಂದು ತುಂಡು, ಒಂದು ತಂಬಿಗೆಗೆ ನೀರು ಸೇರಿಸಿಮೂರು ನಾಮಗಳನ್ನು ಹಾಕಿ ಒಂದು ಕಳಸವನ್ನು ಮಾಡಿಕೊಳ್ಳುತ್ತಾರೆ. ಈ ಕಳಸಕ್ಕೆ ಮನೆಯಲ್ಲಿರುವ ಬಂಗಾರದ ಸರ, ಬಳೆ, ಎಲ್ಲಾ ಹಾಕಿ ಶೃಂಗಾರ ಮಾಡಿ ಮೂರು ನಾಲಕ್ಕು ಜನ ಸೇರಿ ಒಬ್ಬನು ಕಳಸವಿದ್ದ ಮಣೆಯನ್ನು ಮತ್ತೊಬ್ಬ ಬೆಳಕಿಗಾಗಿ ದೊಂದಿಯನ್ನೂ ಬುಟ್ಟಿಯನ್ನು ಹೊತ್ತುಕೊಂಡು ಹೋಗುತ್ತಾರೆ. ಕಳಸ ಮತ್ತು ಪೂಜಾ ಸಾಮಾಗ್ರಿಯೊಡನೆ ಹಿಂದಿನ ದಿನ ಸಿದ್ಧಮಾಡಿದ ಪೂಜಾ ಸ್ಥಳದಲ್ಲಿ ಇಟ್ಟು ಹೊಡೆಬಂದ ಭತ್ತದ ಎರಡು, ಮೂರು, ತೆಂಡೆಯ ಬುಡಕ್ಕೂ, ಕಳಸಕ್ಕೆ, ಮಣ್ಣಿನ ಮುದ್ದೆಗಳಿಗೆ ಕುಂಕುಮ, ಅರಸಿನ, ಗಂಧ,ಚಂದನಗಳನ್ನು ಅರ್ಪಿಸಿ ಬೆಂಕಿಯ ಕೆಂಡದಿಂದ ಧೂಪದಾರತಿಯನ್ನು ಮಾಡುತ್ತಾರೆ.

ನಂತರ ಮನೆಯಿಂದ ತೆಗೆದುಕೊಂಡು ಹೋಗಿದ್ದ ಕಲಸನ್ನದ ಖಾದ್ಯವನ್ನು ಬಾಳೆಹಣ್ಣು, ತೆಂಗಿನಕಾಯಿ, ಹೊಡೆದು ಭತ್ತದ ಪೈರಿಗೂ ನೈವೇದ್ಯ ಅರ್ಪಿಸುತ್ತಾರೆ. ಪೂಜೆ ನಡೆಯುವ ಸಮಯದಲ್ಲಿ ಇನ್ನುಳಿದ ಜನರು ಶಂಖ, ಜಾಗಟೆ, ತುತ್ತೂರಿಗಳನ್ನು ಊದುತ್ತಾರೆ. ಅಲ್ಲದೆ ಒಬ್ಬರು ಕೋವಿಯಿಂದ ಗುಂಡು ಹಾರಿಸಿ ಶಬ್ದ ಮಾಡುತ್ತಾರೆ. ಒಂದು ಕೊಟ್ಟೆ ಕಡುಬನ್ನು ಅದರ ಬಾಳೆಲೆಯ ಹೊದಿಕೆಯ ಸಮೇತವಾಗಿ ಗದ್ದೆಯಲ್ಲಿ 1/2 ಅಡಿ ಗುಂಡಿಮಾಡಿಮುಚ್ಚುತ್ತಾರೆ. ನಂತರ ಒಂದು ಹಿಡಿಯಷ್ಟು ಕಲಸನ್ನವನ್ನು ಗದ್ದೆಗೆ ಬೀಸಿ ಎರಚುತ್ತಾರೆ. ಅನಂತರ ಪೂಜಾಸ್ಥಾನದಲ್ಲಿ ಸೀಮಂತದ ದಿನ ಗರ್ಭಿಣಿಯನ್ನು ಅಲಂಕರಿಸುವಂತೆ ಭತ್ತದ ತೆಂಡೆಗಳಿಗೆ (ಪ್ರಾತಿನಿಧಿಕವಾಗಿ ಒಂದೆರಡಕ್ಕೆ) ಬಿಚ್ಚೋಲೆ, ಬಳೆ, ಅರಶಿಣ, ಕುಂಕುಮ, ಹೂವು ಇತ್ಯಾದಿಗಳನ್ನು ತೊಡಿಸಿ ಅಲಂಕರಿಸುತ್ತಾರೆ. ಇವು ಸುಮಂಗಲೆಯ ಸಂಕೇತಗಳು. ಅಲ್ಲಿ ರಚಿಸಿಟ್ಟಿದ್ದ ಗದ್ದುಗೆಯ ಮೇಲೆ ಕಳಸವೊಂದನ್ನು ಸ್ಥಾಪಿಸಿ ಪೂಜೆಯನ್ನು ಮಾಡುತ್ತಾರೆ. ಹಣ್ಣುಕಾಯಿ ಸೇವೆ, ಕಲಸನ್ನದ ನೈವೇದ್ಯ ಕಾರ್ಯಗಳು ಮುಗಿದ ಮೇಲೆ ಕೆಸುವುನ ಕೊಟ್ಟೆಯನ್ನು ನೀರು ನಿಂತಿರುವ ಸ್ಥಳದಲ್ಲಿ ಗುಂಡಿ ತೆಗೆದು ಹೂಳುತ್ತಾರೆ. ನಂತರ ಕಳಸನ್ನವನ್ನು ಗದ್ದೆಗೆ ಎಸೆಯುತ್ತಾ ಈ ಹಾಡನ್ನು ಹೇಳುತ್ತಾರೆ:

`ಅಚ್ಚಂಬಲಿ ಹಾಲಂಬಲಿ ಬೇಲಿಮ್ಯಾಲರೂ
ದ್ವೊರ ಹೀರೆಕಾಯಿ, ಒಣ ಸೌತೆಕಾಯಿ ನಿತ
ಮುತ್ತೈದೇರ ಅಟ್ಟಂತ ಅಡಗೀ
ಭೂಮಿತಾಯಿ ಬಾಯ್ಬಿಟ್ಟು ಉಣ್ಣವ್ವ'

ಎಂದು ಕೋರಿಕೊಳ್ಳುತ್ತಾನೆ. ಉಳಿದ ಕಲಸನ್ನವನ್ನು ಗದ್ದೆ, ತೋಟ, ಹಿತ್ತಿಲು, ತೆಂಗಿನ ಮರ, ಕಣ, ಕೊಟ್ಟಿಗೆ, ತಿಪ್ಪೆ ಇತ್ಯಾದಿಗಳಿಗೆ ಎರಚುತ್ತಾರೆ. ಈ ಹೊತ್ತಿನಲ್ಲಿ ಕಾಗೆ ಕೂಗಬಾರದು ಎನ್ನುವ ನಂಬಿಕೆ ಪ್ರಚಲಿತವಾಗಿದೆ. (ಅಂಬಳಿಕೆ ಹಿರಿಯಣ;1982”417).

ಇದೇ ರೀತಿಯಾಗಿ ಗದ್ದೆ ಬಯಲಿನಲ್ಲಿ ಬೆಳಗಿನ ಸಮಯದಲ್ಲಿ ಅಲ್ಲಲ್ಲಿ ದೊಂದಿ ಬೆಳಕು, ಶಂಖ, ಜಾಗಟೆಗಳ ಸದ್ದು ಇವುಗಳನ್ನು ನೋಡಲು ಮತ್ತು ಕೇಳಲು ವಿಶೇಷವಾಗಿರುತ್ತದೆ.

**ಸಮಾರೋಪ:**

ರೈತರು ತಾವು ಬೇಸಾಯ ಮಾಡಿದ ಎಲ್ಲಾ ಗದ್ದೆಗಳಿಗೂ ಕಲಸನ್ನವನ್ನ `ಅಚ್ಚಂಬಲಿ ಹಾಲಂಬಲಿ' ಎಂದು ಹೇಳುತ್ತಾ ಒಂದೊಂದು ಬೊಗಸೆಯನ್ನು ಎಸೆಯುತ್ತಾರೆ. `ಹೋಯಿಲೆಗೋ' ಎಂದು ಮತ್ತೆ ಮತ್ತೆ ಕೂಗುತ್ತಾರೆ. ಹೀಗೆ ಕಲಸನ್ನವೆಲ್ಲ ಖಾಲಿಯಾದ ಮೇಲೆ ಒಂದು ಹಿಡಿಯಷ್ಟು ಅನ್ನವನ್ನು ತಂದು ಮನೆಯಲ್ಲಿ ಪೂಜೆಮಾಡುವಾಗ ಹಿರಿಯರ ಎಡೆಗೂ ಬಡಿಸುತ್ತಾರೆ.

ಒಟ್ಟಿನಲ್ಲಿ ಈ ಪೂಜೆಯು ಸಮೃದ್ದಿಯನ್ನು ಬಯಸಿ ನಡೆಸುವ ಒಂದು ವಿಧಿಯಾಗಿದೆ. ರೈತರ ಪಾಲಿಗೆ ಮಹತ್ವಾಕಾಂಕ್ಷೆಯನ್ನು ಉಳ್ಳ ಈ ಆಚರಣೆ ಸಮೃದ್ದಿಯ ಆಶಯದ ಒಂದು ಸ್ವತಂತ್ರ ಆಚರಣೆ ಎಂದು ತಿಳಿಯಬಹುದು.

**ಪರಾಮರ್ಶನ ಗ್ರಂಥಗಳು**

[1] ಉದ್ದೃತ: ವೃಷಭೇಂದ್ರ ಸ್ವಾಮಿ.ಎಸ್.ಎಂ. 1987:67

[2] ಗದ್ದಗೀಮಠ, ಬಿ.ಎಸ್. :1963:141

[3] ಚನ್ನಬಸಪ್ಪ. ಗೊ.ರು:1977:144

[4] ಅಂಬಳಿಕೆ ಹಿರಿಯಣ;1982"417